ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಕೆರೆಗಳ ವಿಸ್ತೀರ್ಣ

1859 (2277) ಶ್ರೀ ಬಸವರಾಜು ಹೆಚ್.ಸಿ (ಪಿರಿಯಾಪಟ್ಟಣ): ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಸೇರಿದ ಎಷ್ಟು ಕೆರೆಗಳಿವೆ;

ಆ. ಆ ಕೆರೆಗಳ ವಿಸ್ತೀರ್ಣ ಎಷ್ಟು;

ಇ. ಕೆರೆಗಳನ್ನು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಈ. ಬಂದಿದ್ದಲ್ಲಿ, ಒತ್ತುವರಿ ಬಿಡಿಸಿಕೊಳ್ಳಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. 12 ಕೆರೆಗಳಿವೆ.

ಆ. ಒಟ್ಟು ವಿಸ್ತೀರ್ಣ 254.60 ಹೆಕ್ಟೇರುಗಳು.

ಇ. ಈ ಕೆರೆಗಳಲ್ಲಿ ಒತ್ತುವರಿಯಾಗಿರುವುದಿಲ್ಲ

ಈ. ಉದ್ಭವಿಸುವುದಿಲ್ಲ.

ಮೂಲಭೂತ ಸೌಲಭ್ಯ ಯೋಜನೆಯಡಿಯಲ್ಲಿ ವಿದ್ಯುತ್ ವ್ಯವಸ್ಥೆಯ ಸುಧಾರಣೆಗೆ ಹುಡ್ಕೋ ನೆರವು

1861 (1693) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೂಲಭೂತ ಸೌಲಭ್ಯ ಯೋಜನೆಯಡಿಯಲ್ಲಿ ವಿದ್ಯುತ್ ವ್ಯವಸ್ಥೆಯ ಸುಧಾರಣೆಗಾಗಿ ನಬಾರ್ಡ್‌ನಿಂದ ನೆರವು ಪಡೆಯುವಲ್ಲಿ ಸರ್ಕಾರ ಆಲೋಚಿಸಿದೆಯೇ;

ಆ. ಆಲೋಚಿಸಿದ್ದಲ್ಲಿ, ಯಾವಾಗಿನಿಂದ ಈ ಯೋಜನೆ ಕಾರ್ಯಾನುಷ್ಠಾನಕ್ಕೆ ಬರಲಿದೆ; ಎಷ್ಟು ಜಿಲ್ಲೆಗಳ ವ್ಯಾಪ್ತಿಗೆ ಅಳವಡಿಸಲಾಗುವುದು; ಹಾಗೂ ನಬಾರ್ಡ್‌ನೆರವು ಮೊತ್ತ ಎಷ್ಟು;

ಇ. ಈ ಯೋಜನೆಯಿಂದ ವಿದ್ಯುತ್ ವ್ಯವಸ್ಥೆ ಸುಧಾರಣೆಯಾಗುವ ಗುರಿ ಇದೆಯೇ?

ಶ್ರೀ ಬಸವರಾಜಪಾಟೀಲ್ (ಇಂಧನ ರಾಜ್ಯ ಸಚಿವರು)

ಅ. ಹೌದು

ಆ. ನಿಗಮದಿಂದ ನೆರವು ಕೋರಲಾಗಿದ್ದು. ನಬಾರ್ಡ್‌ನಿಂದ ಒಪ್ಪಿಗೆ ಬರಬೇಕಾಗಿದೆ.

ಇ. ಈ ಯೋಜನೆಯಿಂದ ವಿದ್ಯುತ್ ವ್ಯವಸ್ಥೆ ಸುಧಾರಣೆಗೆ ಸಹಕಾರಿಯಾಗುವುದು.

ಧಾರವಾಡ ಸ್ಕೂಲ್ ಆಫ್ ಆರ್ಟ್ ಇವರಿಗೆ ನಿವೇಶನ ಹಂಚಿಕೆ

1863 (2492) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ): ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 1965ರಲ್ಲಿ ಪ್ರಾರಂಭವಾದ ಧಾರವಾಡದ ಸ್ಕೂಲ್ ಆಫ್ ಆರ್ಟ್ಸ್ ಕರ್ನಾಟಕದ ಪ್ರಪ್ರಥಮ ಚಿತ್ರಕಲಾ ಶಾಲಾ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಸದರಿ ಚಿತ್ರಕಲಾ ಶಾಲಾ ಪ್ರಾರಂಬಿಸಿರುವ ಶ್ರೀ ಡಿ.ವಿ. ಹಾಲಬಾಂವಿಯವರು ರಾಜ್ಯದ ಪ್ರತಿಷ್ಠಿತ ಚಿತ್ರಕಲಾ ವೆಂಕಟಪ್ಪ ಪ್ರಶಸ್ತಿ ಪಡೆದಿರುವುದು ನಿಜವೆ;